ಸಿಟಿಯ ಗಿಜಿಗಿಜಿಯಿಂದ ಸಾಕಷ್ಟು ದೂರದಲ್ಲಿದ್ದ ಚಿಕ್ಕ ಹೋಟೆಲ್ ಅದು. 'ಡೋಂಟ್ ವರಿ! ಫುಡ್ ಈಸ್ ಸೋ ಯಮ್ಮೀ ಹಿಯರ್' ಎಂದು ಓಪನ್ ಕಾರಿಡಾರಿನ ಮೂಲೆಯ ಕುರ್ಚಿಯಲ್ಲಿ ಹೋಗಿ ಕೂರುತ್ತಾ ನುಡಿದಳು. ತಾವು ಕುಳಿತ ಜಾಗದಿಂದ ಕಾಣುತ್ತಿದ್ದ ರಾತ್ರಿಯ ಶುಭ್ರ ಆಕಾಶವನ್ನೂ, ಮಿನುಗುತ್ತಿರುವ ಅಸಂಖ್ಯ ನಕ್ಷತ್ರಗಳನ್ನೂ, ಕಡು ಹಳದೀ ಬಣ್ಣದ ಬಂಗಾರದಂತಹ ಬೆಳದಿಂಗಳನ್ನು ಚೆಲ್ಲಿ ಮರಗಳ ಮರೆಯಲ್ಲಿ ಇಣುಕುತ್ತಿದ್ದ ಕೆಂಡಸಂಪಿಗೆಯಂತಹ ಚಂದಿರನನ್ನೂ ನೋಡುತ್ತಾ, ಉಕ್ಕಿ ಬಂದ ಉತ್ಕಟ ಭಾವದಲ್ಲಿ ಬೀನಾ ಸೇನ್‌ಳ ಕೈಯನ್ನು ಬಿಗಿಯಾಗಿ ಹಿಡಿದು, ಅವಳನ್ನೇ ನಿಟ್ಟಿಸುತ್ತಾ, ಆಗಿನಿಂದಲೂ ಒಂದೂ ಮಾತನಾಡದೇ ಕುಳಿತ ಸದಾನಂದನ ಕಣ್ಣಲ್ಲಿ ಒಂದು ಸುಂದರ ಕನಸು ತೇಲುತ್ತಿತ್ತು.

ಮನೋಹರವಾದ ಸಮುದ್ರ ತಟದಲ್ಲಿ ಮುಳುಗುತ್ತಿರುವ ಕೆಂಬಣ್ಣದ ಸೂರ್ಯನನ್ನು ನೋಡುತ್ತಾ ಅನ್ಯಮನಸ್ಕನಾಗಿ ಅವನು ಕುಳಿತ್ತಿದ್ದಾನೆ. ಮೆಲ್ಲಗೆ ಅಪ್ಸರೆಯಂತೆ ತೇಲಿ ಬಂದ ಅವಳು ನಿಧಾನವಾಗಿ ಅವನನ್ನು ಹಾದು, ಉಕ್ಕುವ ಅಲೆಗೆ ನುಣುಪಾದ ಕಾಲೊಡ್ಡಿ ಅದೆಷ್ಟು ಹೊತ್ತಿನಿಂದ ಸಮುದ್ರ ಬುಡದಲ್ಲಿ ನಿಂತೇ ಇದ್ದಾಳೆ. ಮುಸ್ಸಂಜೆಯ ಮಬ್ಬಿನಲ್ಲಿ ಕಲಾಕಾರನ ಮೋಹಕ ಕಲಾಕೃತಿಯಂತೆ ಕಾಣಿಸುತ್ತಿರುವ ಆಕೆ ಕತ್ತಲಾವರಿಸುತ್ತಿದ್ದಂತೆ ಮಂದಗತಿಯಲ್ಲಿ ಹೆಜ್ಜೆಯನ್ನಿಡುತ್ತಾ ಹಿಂತಿರುಗಿ, ತಟದಲ್ಲಿ ಒಂಟಿಯಾಗಿ ಕುಳಿತವನ ಸನಿಹಕ್ಕೆ ಬಂದು, ಮಗ್ಗುಲಲ್ಲಿ ಕೂತು, ತನ್ನ ತಲೆಯನ್ನು ಮೃದುವಾಗಿ ಅವನ ಭುಜಕ್ಕೆ ಒರಗಿಸುತ್ತಿದ್ದಾಳೆ. ಕ್ಷಿತಿಜದಂಚಿನಲ್ಲಿ ಮರೆಯಾಗುತ್ತಿರುವ ಕಟ್ಟ ಕಡೆ ಕಿರಣಗಳನ್ನೇ ನಿಟ್ಟಿಸುತ್ತಾ ಅವಳ ತಲೆಗೆ ತನ್ನ ತಲೆಯನ್ನಾನಿಸುತ್ತಿರುವ ಅವನು!...

ದಟ್ಟ ಕಪ್ಪಿನಲ್ಲಿ ಮುಳುಗಿ ಹೋದ ಒಂದು ಗೋಡೆಯಲ್ಲಿ ಎಂದಿನ ಸದ್ದಿನೊಂದಿಗೆ ಹನ್ನೆರಡರ ಗಡಿ ದಾಟಿ ಮಂದಗತಿಯಲ್ಲಿ ಮರುದಿನಕ್ಕೆ ನಾಂದಿ ಹಾಡುತ್ತಿರುವ ಗಡಿಯಾರದ ಕರಾರುವಾಕ್ಕಾದ ಅವವೇ ಮುಳ್ಳುಗಳು!...

(ಬೆಂಗಳೂರಿನ 'ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ' ತನ್ನ 'ಕಥಾಕಮ್ಮಟ'ದ ಭಾಗವಾಗಿ ನಡೆಸಿದ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಕತೆ)

## ಜಯಶ್ರೀ ಕಾಸರವಳ್ಳಿ

ಸೂಕ್ಷ್ಮಸಂವೇದನೆಯ ಕನ್ನಡ ಕತೆಗಾರ್ತಿ ಜಯಶ್ರೀ ಅವರ ಕಥಾಸಂಗ್ರಹಗಳು, 'ತಂತಿ ಬೇಲಿಯ ಒಂಟಿ ಕಾಗೆ', 'ದಿನಚರಿಯ ಕಡೇ ಪುಟದಿಂದ...' ಲ್ಯಾಟಿನ್ ಅಮೆರಿಕಾದ ಪ್ರಸಿದ್ಧ ಬರಹಗಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಕತೆಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಪ್ರಸುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.